ಕರ್ನಾಟಕ ಸರ್ಕಾರ

ಮಾರ್ಚ್ 4, 2016

## ಲೋಕ ಸಭೆಯ ಮಾಜಿ ಸಭಾಧ್ಯಕ್ಷ
## ಪೂರ್ನೋ ಅಜಿತಾಕ್ ಸಾಂಗ್ಮಾ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಮಾರ್ಚ್ 4:

ಮೇಘಾಲಯದ ಮಾಜಿ ಮುಖ್ಯಮಂತ್ರಿ, ಕೇಂದ್ರದ ಮಾಜಿ ಸಚಿವ ಹಾಗೂ ಲೋಕಸಭೆಯ ಮಾಜಿ ಸಭಾಧ್ಯಕ್ಷ ಶ್ರೀ ಪೂರ್ನೋ ಅಜಿತಾಕ್ ಸಾಂಗ್ಮಾ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಮೊದಲು ಪ್ರಾಧ್ಯಾಪಕರಾಗಿ, ನಂತರ ವಕೀಲರಾಗಿ ಹಾಗೂ ತದ ನಂತರ ಪತ್ರಕರ್ತರಾಗಿ ಸೇವೆ ಸಲ್ಲಿಸಿದ ಶ್ರೀ ಪೂರ್ನೋ ಅಜಿತಾಕ್ ಸಾಂಗ್ಮಾ ಅವರು ಭಾರತದ ಮಲೆನಾಡು ಹಾಗೂ ಮಳೆನಾಡು ಎನಿಸಿರುವ ಮೋಡಗಳ ಮನೆ ಮೇಘಾಲಯದ ಮುಖ್ಯಮಂತ್ರಿಯಾಗಿ ಸಮರ್ಥ ಆಡಳಿತ ನೀಡಿದ್ದು ಒಂದು ವಿಶೇಷವಾದರೆ, ಒಂಭತ್ತು ಬಾರಿ ಲೋಕಸಭೆಯನ್ನು ಪ್ರವೇಶಿಸಿದ್ದು ಮತ್ತೊಂದು ವಿಶೇಷ.

ಈಶಾನ್ಯ ರಾಜ್ಯಗಳ ಜನಪ್ರತಿನಿಧಿಗಳಲ್ಲಿ ಅತ್ಯಂತ ಜನಪ್ರಿಯತೆ ಗಳಿಸಿದ ಕೀರ್ತಿ ವಿಶೇಷ ವರ್ಚಸ್ಸು ಬೆಳೆಸಿಕೊಂಡಿದ್ದ ಗೌರವ ಶ್ರೀ ಪೂರ್ನೋ ಅಜಿತಾಕ್ ಸಾಂಗ್ಮಾ ಅವರದ್ದು. ಅಷ್ಟೇ ಅಲ್ಲ ! ಶ್ರೀ ಪೂರ್ನೋ ಅಜಿತಾಕ್ ಸಾಂಗ್ಮಾ ಅವರು ತಮ್ಮ ಕಠಿಣ ನಿಲುವು ಹಾಗೂ ದಿಟ್ಟ ಹೆಜ್ಜೆಗೆ ಮತ್ತೊಂದು ಹೆಸರಾಗಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

ಶ್ರೀ ಪೂರ್ನೋ ಅಜಿತಾಕ್ ಸಾಂಗ್ಮಾ ಅವರ ಆತ್ಮಕ್ಕೆ ಶಾಂತಿ ಲಭಿಸಲಿ. ಶ್ರೀ ಸಾಂಗ್ಮಾ ಅವರ ಕುಟುಂಬ ಹಾಗೂ ಅಭಿಮಾನಿ ವರ್ಗಕ್ಕೆ ಶ್ರೀಯುತರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಮುಖ್ಯಮಂತ್ರಿ ಪ್ರಾರ್ಥಿಸಿದ್ದಾರೆ.

**********

ಡಿ ಪಿ ಎಂ